# ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು(ಆಡಳಿತ)ರವರ ಕಛೇರಿ, ಕಲಬುರಗಿ

ಸಂಖ್ಯೆ: ಸಿ2(1)/ಆಡಳಿತ/ಪ್ರಾಶಾಶಿ/ಪ್ರೌಶಾಶಿ/ಬಡ್ತಿ/180/2020-21

ದಿನಾಂಕ: 09.12.2020

## ಅಧಿಸೂಚನೆ

**ವಿಷಯ :-** **ಕಲಬುರಗಿ ಜಿಲ್ಲೆಯ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬಿ.ಇಡಿ./ಬಿ.ಪಿ.ಇಡಿ. ತರಬೇತಿ ಹೊಂದಿದ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು / ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-2 ಇವರಿಗೆ ಪ್ರೌಢ ಶಾಲಾ ಸಹ ಶಿಕ್ಷಕರು ಗ್ರೇಡ್-2 ಹಾಗೂ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-1 ಹುದ್ದೆಗೆ ಬಡ್ತಿ ನೀಡಲು ದಿನಾಂಕ: 01-01-2021 ರಲ್ಲಿದ್ದಂತೆ 2020ನೇ ಬ್ಲಾಕ್ ಅವಧಿಯ (ದಿನಾಂಕ: 01/01/2020 ರಿಂದ 31/12/2020 ರವರೆಗೆ) ಮೇರಿಟ್ ಆಧಾರಿತ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಕುರಿತು.**

* * *

ಕಲಬುರಗಿ ಜಿಲ್ಲೆಯ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬಿ.ಇಡಿ./ಬಿ.ಪಿ.ಇಡಿ. ತರಬೇತಿ ಹೊಂದಿದ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು / ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-2 ಇವರಿಗೆ ಪ್ರೌಢ ಶಾಲಾ ಸಹ ಶಿಕ್ಷಕರು ಗ್ರೇಡ್-2 ಹಾಗೂ ದೈಹಿಕ ಶಿಕ್ಷಣ ಶಿಕ್ಷಕರು ಗ್ರೇಡ್-1 ಹುದ್ದೆಗೆ ಬಡ್ತಿ ನೀಡಲು ದಿನಾಂಕ: 01-01-2021 ರಲ್ಲಿದ್ದಂತೆ 2020ನೇ ಬ್ಲಾಕ್ ಅವಧಿಯ (ದಿನಾಂಕ: 01/01/2020 ರಿಂದ 31/12/2020 ರವರೆಗೆ) ಮೇರಿಟ್ ಆಧಾರಿತ ವಿಷಯವಾರು ಹಾಗೂ ಮಾಧ್ಯಮವಾರು, ಮೂಲ ವೃಂದ, ಸ್ಥಳೀಯ ವೃಂದ ಹಾಗೂ ಉಳಿದ ಮೂಲ ವೃಂದದ ಪ್ರತ್ಯೇಕವಾದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಕಛೇರಿಯ ವೆಬ್‌ಸೈಟ (ddpikalaburagi.in/seniority.aspx) ದಲ್ಲಿ ಪ್ರಕಟಿಸಲಾಗಿದೆ.

ದಿನಾಂಕ: 31-12-2020 ರವರೆಗೆ ಬಿ.ಇಡಿ. / ಬಿ.ಪಿ.ಇಡಿ. / ಸ್ನಾತಕೋತ್ತರ (ಸಂಬಂಧಿಸಿದ ಭಾಷಾ ಶಿಕ್ಷಕರ ವಿಷಯಗಳಿಗೆ ಮಾತ್ರ) ಪದವಿಯ ಫಲಿತಾಂಶವನ್ನು ಪ್ರಕಟಿಸಲಾದ ಶಿಕ್ಷಕರ ಹೆಸರು 2020ನೇ ಬ್ಲಾಕ್ ಅವಧಿಯ ಅಂತಿಮ ಜೇಷ್ಠತಾ ಪಟ್ಟಿಯಲ್ಲಿ ಸೇರಿಸಬೇಕಾಗಿದೆ.

ಸಂಬಂಧಿಸಿದ ಶಿಕ್ಷಕರು ಸದರಿ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಗಮನಿಸಿ ಪಟ್ಟಿಯಲ್ಲಿ ನಮೂದಿಸಿರುವ ಈ ಕೆಳಕಂಡ ನಮೂದನೆ ಕುರಿತು ಏನಾದರು ತಿದ್ದುಪಡಿಗಳು ಇದ್ದಲ್ಲಿ ವೆಬ್‌ಸೈಟನಲ್ಲಿ ಪ್ರಕಟಿಸಿದ ನಿಗದಿತ ನಮೂನೆಯಲ್ಲಿ ಆಕ್ಷೇಪಣೆಗಳನ್ನು ಪೂರಕ ದಾಖಲೆಗಳೊಂದಿಗೆ ದಿನಾಂಕ: 21-12-2020 ರವರೆಗೆ ಈ ಕಛೇರಿಗೆ ಸಲ್ಲಿಸಬಹುದು. ನಿಗದಿಪಡಿಸಲಾದ ಅವಧಿಯ ನಂತರ ಸಲ್ಲಿಸಲಾದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವದಿಲ್ಲ.

1. ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿ ಪ್ರಕ್ರಿಯೆಯಲ್ಲಿ ಮೇರಿಟ್ ಆಧಾರಿತ ಆಯ್ಕೆಯ ಪೂರ್ವದಲ್ಲಿ ಜಿಲ್ಲಾ ಮಟ್ಟದ ನೇಮಕಾತಿ ಸಮಿತಿಯಿಂದ ನೇಮಕಗೊಂಡ ಶಿಕ್ಷಕರ ಜೇಷ್ಠತೆಯನ್ನು ಸೇವೆಗೆ ಸೇರಿದ ದಿನಾಂಕವನ್ನು ಆಧಾರಿಸಿ ನಿಗದಿಪಡಿಸಲಾಗಿದೆ. 1991-92ನೇ ಸಾಲಿನಿಂದ ಮೇರಿಟ್ ಆಧಾರಿತ ಆಯ್ಕೆ ಪ್ರಕ್ರಿಯೆಯನ್ನು ನಡೆಸಲಾಗಿದ್ದು, 2001-02ನೇ ಸಾಲಿನಿಂದ ಸಂಯುಕ್ತ ಸ್ಪರ್ಧಾತ್ಮಕ ಪರೀಕ್ಷೆಯ ಮೂಲಕ ಆಯ್ಕೆಯನ್ನು ನಡೆಸಲಾಗಿದೆ. ಅದರಂತೆ ಸದರಿ ಆಯ್ಕೆ ಪ್ರಕ್ರಿಯೆಯಲ್ಲಿ ಆಯಾ ನೇಮಕಾತಿ ವರ್ಷಗಳ ಆಯ್ಕೆ ಪಟ್ಟಿಗಳಲ್ಲಿ ಅಭ್ಯರ್ಥಿಗಳಿಂದ ಪಡೆದುಕೊಂಡಿರುವ ಮೇರಿಟ್‌ವನ್ನು ಆಧಾರಿಸಿ ಪ್ರಸ್ತುತ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಮುಂದುವರೆದು ಬೇರೆ ಜಿಲ್ಲೆಗಳಲ್ಲಿ ನೇಮಕಾತಿ ಹೊಂದಿ ಈ ಜಿಲ್ಲೆಗೆ ವರ್ಗಾವಣೆ ಮೂಲಕ ಬಂದಿರುವ ಶಿಕ್ಷಕರ ಜೇಷ್ಠತೆಯನ್ನು ಈ ಜಿಲ್ಲೆಯಲ್ಲಿ ಕರ್ತವ್ಯಕ್ಕೆ ಹಾಜರಾದ ದಿನಾಂಕದಂತೆ ನಿಗದಿಪಡಿಸಲಾಗಿದೆ.

2. ಪ್ರಸ್ತುತ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ ನೇಮಕಾತಿ ಪ್ರಕ್ರಿಯೆ ವರ್ಷದ ಮಾಹಿತಿ, ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಶಾಲೆಯ ಹೆಸರು, ತಾಲೂಕು, ಪ್ರವರ್ಗ, ಜನ್ಮ ದಿನಾಂಕ, ಸೇವೆಗೆ ಸೇರಿದ ದಿನಾಂಕ, ಕಲಬುರಗಿ ಜಿಲ್ಲೆಗೆ ವರ್ಗಾವಣೆ ಮೂಲಕ ಬಂದಿರುವ ದಿನಾಂಕ, ನೇಮಕಾತಿಯ ವಿಧಾನ,

ಪ್ರಾಥಮಿಕ ಶಾಲಾ ಶಿಕ್ಷಕರ ಆಯ್ಕೆ ಪಟ್ಟಿಯಲ್ಲಿದ್ದಂತೆ ಮೆರಿಟ್, ಬೋಧನಾ ಮಾಧ್ಯಮ, ಪದವಿಯ ಐಚ್ಛಿಕ ವಿಷಯಗಳು, ಬಿ.ಇಡಿ. ಬೋಧನಾ ವಿಧಾನಗಳು ಹಾಗೂ ಉತ್ತೀರ್ಣರಾಗಿದ ವರ್ಷ, ಸ್ನಾತಕೋತ್ತರ ಪದವಿಯ ವಿಷಯ (ಭಾಷಾ ಶಿಕ್ಷಕರಿಗೆ ಮಾತ್ರ) ಹಾಗೂ ಉತ್ತೀರ್ಣರಾಗಿದ ವರ್ಷದ ಕುರಿತು ಏನಾದರು ತಿದ್ದುಪಡಿಗಳು ಇದ್ದಲ್ಲಿ ನಿಗದಿತ ನಮೂನೆಯಲ್ಲಿ ಆಕ್ಷೇಪಣೆ ಸಲ್ಲಿಸುವುದು.

3. ಕೆಲವೊಂದು ಶಿಕ್ಷಕರು ತಮ್ಮ ಪ್ರಸ್ತಾವನೆಯೊಂದಿಗೆ ಮೆರಿಟ್‌ನ್ನು ನಮೂದಿಸದೆ ಇರುವುದರಿಂದ ಅವರು ಆಯಾ ವರ್ಷದಲ್ಲಿ ನೇಮಕಾತಿ ಹೊಂದಿದ ಶಿಕ್ಷಕರ ಕೆಳಗೆ ಸ್ಥಾನ ಪಡೆದುಕೊಂಡಿರುತ್ತಾರೆ. ಸದರಿ ಶಿಕ್ಷಕರು ಈ ಜಿಲ್ಲೆಯಲ್ಲಿ ಆಯ್ಕೆ ಹಾಗೂ ನೇಮಕಾತಿ ಹೊಂದಿದಲ್ಲಿ ತಮ್ಮ ನೇಮಕಾತಿ ಆದೇಶದ ಪ್ರತಿಯೊಂದಿಗೆ ನೇಮಕಾತಿ ವಿಭಾಗಕ್ಕೆ ಸಂಪರ್ಕಿಸಿ ಆಯ್ಕೆ ಪಟ್ಟಿಯನ್ನು ಗಮನಿಸಿ ತಮ್ಮ ಮೆರಿಟವನ್ನು ಪಡೆದು ನಿಗದಿತ ನಮೂನೆಯಲ್ಲಿ ಆಕ್ಷೇಪಣೆಯನ್ನು ಸಲ್ಲಿಸುವುದು. ಒಂದು ವೇಳೆ ಮೆರಿಟ್ ಮಾಹಿತಿ ಒದಗಿಸದೆ ಇದ್ದಲ್ಲಿ ಸಂಬಂಧಿಸಿದ ಶಿಕ್ಷಕರ ಹೆಸರು ಆಯಾ ವರ್ಷದ ಪಟ್ಟಿಯಲ್ಲಿ ಯಥವತ್ತಾಗಿ ಕೊನೆಯ ಸ್ಥಾನದಲ್ಲಿ ಮುಂದುವರೆಸಲಾಗುವುದು. ಸದರಿ ಶಿಕ್ಷಕರು ಬೇರೆ ಜಿಲ್ಲೆಯಲ್ಲಿ ನೇಮಕಾತಿ ಹೊಂದಿದಲ್ಲಿ ಈ ಜಿಲ್ಲೆಗೆ ಸೇರಿದ ದಿನಾಂಕದ ವಿವರಗಳನ್ನು ಸಲ್ಲಿಸುವುದು.

4. 2020ನೇ ಬ್ಲಾಕ್ ಅವಧಿಯಲ್ಲಿ ಅಂದರೆ ದಿನಾಂಕ: 01-01-2020 ರಿಂದ 31-12-2020 ರ ಮಧ್ಯದ ಅವಧಿಯಲ್ಲಿ ಬಿ.ಇಡಿ. ಫಲಿತಾಂಶ ಹಾಗೂ ಆಯಾ ಭಾಷೆಗೆ ಸಂಬಂಧಿಸಿದಂತೆ, ಸ್ನಾತಕೋತ್ತರ ಪದವಿಯ ಫಲಿತಾಂಶ ಪ್ರಕಟಿಸಿದ ಶಿಕ್ಷಕರ ಹೆಸರು ಪ್ರಸ್ತುತ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ ಸೇರದೆ ಇದ್ದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಿಂದ ಸೇವಾ ವಿವರ ನಮೂನೆಯನ್ನು ಪಡೆದು ಕ್ಷೇತ್ರ ಶಿಕ್ಷಣಾಧಿಕಾರಿಗಳ ಧೃಢೀಕರಣ ಹಾಗೂ ಶೈಕ್ಷಣಿಕ ಅರ್ಹತೆಗೆ ಸಂಬಂಧಿಸಿದ ಎಲ್ಲಾ ದಾಖಲೆಗಳ ಪ್ರತಿಗಳು ಮತ್ತು ಸ್ಥಳೀಯ ಅಭ್ಯರ್ಥಿಯ ಪ್ರಮಾಣ ಪತ್ರ (ಅನುಬಂಧ-ಎ) ಹಾಗೂ ಸಹಮತಿ ಪತ್ರ (ಅನುಬಂಧ-ಸಿ) ದೊಂದಿಗೆ ಪ್ರಸ್ತಾವನೆಯನ್ನು ದಿನಾಂಕ: 31-12-2020 ರವರೆಗೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ ಸಲ್ಲಿಸತಕ್ಕದ್ದು. ಅದರಂತೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಿಕ್ಷಕರಿಂದ ಸಲ್ಲಿಸಲಾಗಿರುವ ಪ್ರಸ್ತಾವನೆಗಳನ್ನು ಪರಿಶೀಲಿಸಿ, ತಮ್ಮ ಧೃಢೀಕರಣದೊಂದಿಗೆ ದಿನಾಂಕ: 04-01-2021 ರಂದು ಸಂಬಂಧಿಸಿದ ವಿಷಯ ನಿರ್ವಾಹಕರರೊಂದಿಗೆ ಈ ಕಛೇರಿಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

5. ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ ಸ್ಥಾನ ಪಡೆದುಕೊಂಡಿರುವ ಶಿಕ್ಷಕರು ಈ ಜಿಲ್ಲೆಯಿಂದ ಬೇರೆ ಜಿಲ್ಲೆಗೆ ವರ್ಗಾವಣೆ ಮೂಲಕ ಹೋಗಿದಲ್ಲಿ ಅವರ ವಿವರಗಳನ್ನು ಬಿಡುಗಡೆಯಾದ ದಿನಾಂಕ ಹಾಗೂ ವರ್ಗಾವಣೆಯಾದ ಜಿಲ್ಲೆಯ ಹೆಸರಿನೊಂದಿಗೆ ದಿನಾಂಕ: 04-01-2021 ರಂದು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಈ ಕಛೇರಿಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

ಉಪನಿರ್ದೇಶಕರು (ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ

ಪ್ರತಿಯನ್ನು :-

1. ಮಾನ್ಯ ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ ರವರ ದಯಾಪರ ಮಾಹಿತಿಗಾಗಿ ಸಲ್ಲಿಸಿದೆ.
2. ಜಿಲ್ಲೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಇವರಿಗೆ ಕಳುಹಿಸುತ್ತಾ ತಮ್ಮ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಿ ಸಂಬಂಧಿಸಿದ ಶಿಕ್ಷಕರ ಗಮನಕ್ಕೆ ತರಲು ತಿಳಿಸಿದೆ.
3. ಕಛೇರಿಯ ಸೂಚನಾ ಫಲಕಕ್ಕೆ.

## 01/01/2020 ರಿಂದ 31/12/2020ರ ವರೆಗೆ ಬಿ.ಇಡಿ/ಬಿ.ಪಿ.ಇಡಿ ತರಬೇತಿ ಹೊಂದಿದ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು ಸಲ್ಲಿಸಬೇಕಾದ ಪ್ರಸ್ತಾವನೆ ನಮೂನೆ

| | | |
|---|---|---|
| 1 | ಶಿಕ್ಷಕರ ಹೆಸರು | |
| 2 | ಶಾಲೆಯ ಹೆಸರು ಮತ್ತು ವಿಳಾಸ | |
| 3 | ಜನ್ಮ ದಿನಾಂಕ | |
| 4 | ಸೇವೆಗೆ ಸೇರಿದ ದಿನಾಂಕ | |
| 5 | ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗೆ ಆಯ್ಕೆಯಾದ ಮೆರಿಟ್ (ಆಯ್ಕೆ ಪಟ್ಟಿಯಲ್ಲಿರುವಂತೆ) | |
| 6 | ಸೇವಾ ಸಕ್ರಮ ದಿನಾಂಕ | |
| 7 | ಬೇರೆ ಜಿಲ್ಲೆಯಿಂದ ವರ್ಗಾವಣೆಯಾಗಿ ಈ ಜಿಲ್ಲೆಗೆ ಬಂದಿದಲ್ಲಿ ಆ ಜಿಲ್ಲೆಯ ಹೆಸರು, ಈ ಜಿಲ್ಲೆಗೆ ಬಂದ ದಿನಾಂಕ | |
| 8 | ಪ್ರವರ್ಗ (ಎಸ್.ಸಿ/ಎಸ್.ಟಿ/ಸಾಮಾನ್ಯ) | |
| 9 | ಮೂಲ ಸೇವಾ ಪುಸ್ತಕದಲ್ಲಿ ಸ್ವಗ್ರಾಮ ಘೋಷಣೆ ಮಾಡಿದ ಮಾಹಿತಿ, ಗ್ರಾಮ, ತಾಲೂಕು & ಜಿಲ್ಲೆ (ಅನುಬಂಧ–ಎ ಮತ್ತು ಸಿ ಲಗತ್ತಿಸುವುದು) | |
| 10 | ಎಸ್.ಎಸ್.ಎಲ್.ಸಿ ವ್ಯಾಸಂಗ ಮಾಧ್ಯಮ | |
| 11 | ಬಿ.ಎ/ಬಿ.ಎಸ್.ಸಿ ಪದವಿ ಪಾಸಾದ ವರ್ಷ, ತಿಂಗಳು ವಿಶ್ವ ವಿದ್ಯಾಲಯದ ಹೆಸರು | |
| 12 | ಬಿ.ಎ/ಬಿ.ಎಸ್.ಸಿ/ಬಿ.ಇಡಿ ರೆಗ್ಯುಲರ್ ಅಭ್ಯರ್ಥಿಯಾಗಿ ವ್ಯಾಸಂಗ ಮಾಡಲು ಇಲಾಖಾ ಅನುಮತಿ ಪಡೆದ ಪತ್ರ ಸಂಖ್ಯೆ & ದಿನಾಂಕ: (ಪ್ರತಿ ಲಗತ್ತಿಸುವುದು) | |
| 13 | ಪದವಿಯಲ್ಲಿ ವ್ಯಾಸಂಗ ಮಾಡಿದ ಐಚ್ಛಿಕ ವಿಷಯಗಳು | 1 2. 3. |
| 14 | ಬಿ.ಇಡಿ ನಲ್ಲಿ ಬೋಧನಾ ವಿಷಯಗಳು(ಮೆಥಡ್) | 1. 2. |
| 15 | ಶಿಕ್ಷಕರ ಮೊಬೈಲ್ ಸಂಖ್ಯೆ | |

ಅರ್ಜಿದಾರರ ಹೆಸರು & ರುಜು

ಈ ಮೇಲಿನ ಶಿಕ್ಷಕರ ಸೇವಾ ಮಾಹಿತಿ ಪರಿಶೀಲಿಸಿ ಸರಿಯಿದೆಯೆಂದು ದೃಢೀಕರಿಸಿದೆ.

ಕ್ಷೇತ್ರ ಶಿಕ್ಷಣಾಧಿಕಾರಿಗಳ ರಜು ಮತ್ತು ಮೊಹರು

# ಆಕ್ಷೇಪಣೆ ನಮೂನೆ

| | | |
|---|---|---|
| 1 | ಶಿಕ್ಷಕರ ಹೆಸರು ಹಾಗೂ ತಾತ್ಕಾಲಿಕ ಜೇಷ್ಠತಾ ಪಟ್ಟಿಯ ವಿಷಯ ಮತ್ತು ಕ್ರಮ ಸಂಖ್ಯೆ | |
| 2 | ಶಾಲೆಯ ಹೆಸರು ಮತ್ತು ವಿಳಾಸ | |
| 3 | ಜನ್ಮ ದಿನಾಂಕ | |
| 4 | ಸೇವೆಗೆ ಸೇರಿದ ದಿನಾಂಕ | |
| 5 | ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗೆ ಆಯ್ಕೆಯಾದ ಮೆರಿಟ್ (ಆಯ್ಕೆ ಪಟ್ಟಿಯಲ್ಲಿರುವಂತೆ) | |
| 6 | ಸೇವಾ ಸಕ್ರಮ ದಿನಾಂಕ | |
| 7 | ಬೇರೆ ಜಿಲ್ಲೆಯಿಂದ ವಗಾವಣೆಯಾಗಿ ಈ ಜಿಲ್ಲೆಗೆ ಬಂದಿದಲ್ಲಿ ಆ ಜಿಲ್ಲೆಯ ಹೆಸರು, ಈ ಜಿಲ್ಲೆಗೆ ಬಂದ ದಿನಾಂಕ | |
| 8 | ಪ್ರವರ್ಗ (ಎಸ್.ಸಿ/ಎಸ್.ಟಿ/ಸಾಮಾನ್ಯ) | |
| 9 | ಮೂಲ ಸೇವಾ ಪುಸ್ತಕದಲ್ಲಿ ಸ್ವಗ್ರಾಮ ಘೋಷಣೆ ಮಾಡಿದ ಮಾಹಿತಿ, ಗ್ರಾಮ, ತಾಲೂಕು & ಜಿಲ್ಲೆ (ಅನುಬಂಧ-ಎ ಮತ್ತು ಸಿ ಲಗತ್ತಿಸುವುದು) | |
| 10 | ಎಸ್.ಎಸ್.ಎಲ್.ಸಿ ವ್ಯಾಸಂಗ ಮಾಧ್ಯಮ | |
| 11 | ಬಿ.ಎ/ಬಿ.ಎಸ್.ಸಿ ಪದವಿ ಪಾಸಾದ ವರ್ಷ, ತಿಂಗಳು ವಿಶ್ವ ವಿದ್ಯಾಲಯದ ಹೆಸರು | |
| 12 | ಬಿ.ಎ/ಬಿ.ಎಸ್.ಸಿ/ಬಿ.ಇಡಿ ರೆಗ್ಯುಲರ್ ಅಭ್ಯರ್ಥಿಯಾಗಿ ವ್ಯಾಸಂಗ ಮಾಡಲು ಇಲಾಖಾ ಅನುಮತಿ ಪಡೆದ ಪತ್ರ ಸಂಖ್ಯೆ & ದಿನಾಂಕ: (ಪ್ರತಿ ಲಗತ್ತಿಸುವುದು) | |
| 13 | ಪದವಿಯಲ್ಲಿ ವ್ಯಾಸಂಗ ಮಾಡಿದ ಐಚ್ಛಿಕ ವಿಷಯಗಳು | 1 2 3 |
| 14 | ಬಿ.ಇಡಿ ನಲ್ಲಿ ಬೋಧನಾ ವಿಷಯಗಳು(ಮೆಥಡ್) | 1. 2. |
| 15 | ಶಿಕ್ಷಕರ ಮೊಬೈಲ್ ಸಂಖ್ಯೆ | |
| 16 | ಆಕ್ಷೇಪಣೆಯ ವಿವರಗಳು (ಪೂರಕ ದಾಖಲೆಗಳೊಂದಿಗೆ ಸಲ್ಲಿಸತಕ್ಕದ್ದು) | |

ಶಿಕ್ಷಕರ ಹೆಸರು & ರುಜು